# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 713
ಉತ್ತರಿಸಬೇಕಾದ ದಿನಾಂಕ : 12.07.2023
ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಪ್ರತಿ ಲೀಟರ್ ಹಾಲಿಗೆ ರೈತರಿಗೆ ನೀಡುತ್ತಿರುವ ಪ್ರೋತ್ಸಾಹಧನ ಎಷ್ಟು; ಯಾವ ಯಾವ ವರ್ಷದಲ್ಲಿ ಪ್ರೋತ್ಸಾಹ ಧನ ಹೆಚ್ಚಳವಾಗಿದೆ; (ವಿವರ ನೀಡುವುದು)</td><td>ರಾಜ್ಯದಲ್ಲಿ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ನೀಡುತ್ತಿರುವ ಪ್ರೋತ್ಸಾಹಧನವು ರೂ.5/- ಇರುತ್ತದೆ.<br><br>ವರ್ಷವಾರು ಪ್ರೋತ್ಸಾಹಧನ ಹೆಚ್ಚಳದ ವಿವರ ಈ ಕೆಳಗಿನಂತಿರುತ್ತದೆ:<br>
<table>
<tr><th>ಕ್ರ.ಸಂ.</th><th>ವರ್ಷ ಮತ್ತು ದಿನಾಂಕ</th><th>ಪ್ರತಿ ಲೀಟರ್ ಹಾಲಿಗೆ ಹೆಚ್ಚಳವಾದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>09.09.2008</td><td>2.00</td></tr>
<tr><td>2</td><td>14.05.2013</td><td>4.00</td></tr>
<tr><td>3</td><td>ಡಿಸೆಂಬರ್-2016 ರಿಂದ ಈವರೆಗೆ</td><td>5.00</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿ ಪ್ರತಿ ನಿತ್ಯ ಉತ್ಪಾದನೆಯಾಗುವ ಹಾಲಿನ ಪ್ರಮಾಣ ಎಷ್ಟು; ರಾಜ್ಯದಲ್ಲಿ ಹಾಗೂ ಹೊರ ರಾಜ್ಯದಲ್ಲಿ ಬಳಕೆಯಾಗುವ ಪ್ರಮಾಣ ಎಷ್ಟು; (ವಿವರ ನೀಡುವುದು)</td><td>ರಾಜ್ಯದಲ್ಲಿ ಪ್ರತಿನಿತ್ಯ 351 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ ಎಂದು ಅಂದಾಜಿಸಲಾಗಿದೆ.<br><br>ಅದರಲ್ಲಿ ಕರ್ನಾಟಕ ಹಾಲು ಮಹಾಮಂಡಳದ ವ್ಯಾಪ್ತಿಯಲ್ಲಿರುವ 15 ಜಿಲ್ಲಾ ಹಾಲು ಒಕ್ಕೂಟಗಳಿಂದ 2023-24 ನೇ ಸಾಲಿನಲ್ಲಿ ಪ್ರತಿ ನಿತ್ಯ ಸರಾಸರಿ 81.33 ಲಕ್ಷ ಲೀಟರ್ ಹಾಲು ಶೇಖರಣೆ ಆಗುತ್ತಿದೆ.<br><br>ರಾಜ್ಯದಲ್ಲಿ ಹಾಗೂ ಹೊರರಾಜ್ಯದಲ್ಲಿ ಬಳಕೆಯಾಗಿರುವ ಹಾಲು ಮತ್ತು ಉತ್ಪನ್ನಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.<br>
<table>
<tr><th>ಕ್ರ ಸಂ</th><th>ವಿವರ</th><th>ರಾಜ್ಯ (ಸರಾಸರಿ ಪ್ರತಿ ದಿನ ಲಕ್ಷ ಲೀ/ಕೆಜಿ ಗಳಲ್ಲಿ)</th><th>ಹೊರ ರಾಜ್ಯ (ಸರಾಸರಿ ಪ್ರತಿ ದಿನ ಲಕ್ಷ ಲೀ/ಕೆಜಿ ಗಳಲ್ಲಿ)</th></tr>
<tr><td>1</td><td>ಹಾಲು (ಸ್ಯಾಚೆ ಹಾಲು ಮತ್ತು ಯು.ಹೆಚ್.ಟಿ.)</td><td>43.76</td><td>10.05</td></tr>
<tr><td>2</td><td>ಇತರೆ ಉತ್ಪನ್ನಗಳು</td><td>26.52</td><td>1.00</td></tr>
<tr><td colspan="2">ಒಟ್ಟು</td><td>70.28</td><td>11.05</td></tr>
<tr><td colspan="2">ಒಟ್ಟಾರೆ ರಾಜ್ಯ ಮತ್ತು ಹೊರರಾಜ್ಯ</td><td colspan="2">81.33</td></tr>
</table></td></tr>
<tr><td>ಇ</td><td>ರಾಜ್ಯದ ನಂದಿನಿ ಹಾಲಿನ ಕುರಿತು ಕೆಲ ಹೊರ ರಾಜ್ಯಗಳಲ್ಲಿ ಕಳಪೆ ಗುಣಮಟ್ಟವೆಂದು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು; ಕಳಪೆ ಗುಣಮಟ್ಟದ್ದಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು;</td><td>ಕರ್ನಾಟಕ ಹಾಲು ಮಹಾಮಂಡಳವು ಕಳೆದ 10-12 ವರ್ಷಗಳಿಂದ ಕೇರಳ ಸಹಕಾರ ಸಂಸ್ಥೆ "ಮಿಲ್ಮಾ" ರವರಿಗೆ ಸರಾಸರಿ ದಿನವಹಿ 2 ಲಕ್ಷ ಲೀಟರ್ ಹಾಲನ್ನು ಸರಬರಾಜು ಮಾಡುತ್ತಾ ಬಂದಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳದಿಂದ ಹಾಲಿನ ಜೊತೆಗೆ ಕೇರಳ ರಾಜ್ಯದಲ್ಲಿ ಪ್ರಥಮವಾಗಿ ನಂದಿನಿ ಉತ್ಪನ್ನಗಳ ಮಾರಾಟ ಆರಂಭಿಸಿದ್ದರಿಂದ, ಕೇರಳ ರಾಜ್ಯದ ಮಾನ್ಯ ಪಶುಸಂಗೋಪನಾ ಸಚಿವರು ಈ</td></tr>
</table>

| | | |
|---|---|---|
| | | ರೀತಿಯ ಹೇಳಿಕೆಯನ್ನು ನೀಡಿರುವುದು ಮಾಧ್ಯಮದಲ್ಲಿ ವರದಿಯಾಗಿರುತ್ತದೆ. ಆದರೆ ಯಾವುದೇ ಸಂದರ್ಭದಲ್ಲಿ ಕೇರಳಕ್ಕೆ ಸರಬರಾಜಾದ ಹಾಲಿನ ಗುಣಮಟ್ಟದಲ್ಲಿ ಕಳಪೆಯಾಗಿ ತಿರಸ್ಕೃತಗೊಂಡ ವರದಿಗಳು ಸ್ವೀಕೃತವಾಗಿರುವುದಿಲ್ಲ.<br><br>ಕರ್ನಾಟಕ ಹಾಲು ಮಹಾಮಂಡಳದ ನಂದಿನಿ ಉತ್ಪನ್ನಗಳನ್ನು ದೇಶಾದ್ಯಂತ ಆಹಾರ ಸುರಕ್ಷತಾ ಕಾಯ್ದೆಯನ್ವಯ ಎಲ್ಲಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಗುಣಮಟ್ಟವನ್ನು ಕಾಯ್ದುಕೊಂಡು ಮಾರಾಟ ಮಾಡಲಾಗುತ್ತಿದೆ. ಗುಣಮಟ್ಟದ ಬಗ್ಗೆ ಈವರೆವಿಗೂ ಯಾವುದೇ ದೂರುಗಳು ವರದಿಯಾಗಿರುವುದಿಲ್ಲ. |
| ಈ | ಕೇರಳ ಸಹಕಾರ ಹಾಲು ಒಕ್ಕೂಟವು ನಮ್ಮ ರಾಜ್ಯದ ನಂದಿನಿ ಹಾಲನ್ನು ನಿಷೇಧಿಸುವುದಾಗಿ ಅಥವಾ ಮಾರಾಟಕ್ಕೆ ಅವಕಾಶ ನೀಡುತ್ತಿಲ್ಲದಿರುವ ಕುರಿತು ನಿಲುವುಗಳಿರುವುದು ನಿಜವೇ, ಹಾಗಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಸಮಸ್ಯೆ ಉಲ್ಬಣವಾಗಿರುತ್ತದೆ? (ವಿವರ ನೀಡುವುದು) | ಕೇರಳ ಸಹಕಾರ ಹಾಲು ಒಕ್ಕೂಟವು ನಮ್ಮ ರಾಜ್ಯದ ನಂದಿನಿ ಹಾಲಿನ ಮಾರಾಟಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಿರುವ ಕುರಿತು ದಿನಪತ್ರಿಕೆ ಹಾಗೂ ಟಿ.ವಿ. ಮಾಧ್ಯಮಗಳ ವರದಿಗಳ ಮೂಲಕ ತಿಳಿದು ಬಂದಿರುತ್ತದೆಯೇ ವಿನಃ ಕೇರಳ ಸಹಕಾರಿ ಹಾಲು ಮಾರಾಟ ಮಹಾಮಂಡಳಿಯಿಂದ ನೇರವಾಗಿ ಯಾವುದೇ ನಿಲುವುಗಳು ಲಿಖಿತವಾಗಿ ಅಥವಾ ಮೌಖಿಕವಾಗಿ ಲಭ್ಯವಾಗಿರುವುದಿಲ್ಲ.<br><br>ಆದರೆ ಕೇರಳ ಸರ್ಕಾರದ ಕ್ರೀಡಾ & ಯುವ ವ್ಯವಹಾರಗಳು, ಪಶುಸಂಗೋಪನೆ, ಹೈನು ಅಭಿವೃದ್ಧಿ, ವಸ್ತು ಸಂಗ್ರಹಾಲಯ ಇಲಾಖೆಯ ಕಾರ್ಯದರ್ಶಿಗಳಿಂದ ಕೇರಳ ಸಹಕಾರಿ ಹಾಲು ಮಾರಾಟ ಮಹಾಮಂಡಳಿ ಕಾರ್ಯ ವ್ಯಾಪ್ತಿಯಲ್ಲಿ ನಂದಿನಿ ಸ್ಯಾಚೆ ಹಾಲು ಮಾರಾಟ ವಿಷಯ ಕುರಿತಂತೆ ಕರ್ನಾಟಕ ಸರ್ಕಾರಕ್ಕೆ ಪತ್ರ ಸ್ವೀಕೃತಗೊಂಡಿದ್ದು, ಸದರಿ ಪತ್ರದಲ್ಲಿ ಪ್ರಸ್ತಾಪಿಸಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿದ್ದು, ಈ ಕುರಿತಂತೆ ಗಮನಹರಿಸಲು ಕೋರಿರುತ್ತಾರೆ.<br>1. ಕರ್ನಾಟಕ ಹಾಲು ಮಹಾಮಂಡಳವು ನಂದಿನಿ ಬ್ರ್ಯಾಂಡ್ ದ್ರವ ಹಾಲು ಮತ್ತು ಉತ್ಪನ್ನಗಳ ವಿತರಣೆಗಾಗಿ ಕೇರಳದಾದ್ಯಂತ ಔಟ್ ಲೆಟ್ ಸ್ಥಾಪಿಸುವ ಜೊತೆಗೆ ಆಧುನಿಕ ವ್ಯಾಪಾರ ಮಳಿಗೆಗಳ ಮುಖಾಂತರ ಮತ್ತಷ್ಟು ವಿಸ್ತರಣೆಯನ್ನು ಕೈಗೊಳ್ಳುತ್ತಿರುವುದು.<br>2. ಅಮೂಲ್ ಬ್ರ್ಯಾಂಡ್ ಹಾಲನ್ನು ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ತೀವ್ರ ವಿರೋಧಿಸಿದ ಕರ್ನಾಟಕ ಹಾಲು ಮಹಾಮಂಡಳವು ದ್ವಿಮುಖ ನೀತಿಯನ್ನು ಅನುಸರಿಸುತ್ತಾ, ದ್ರವರೂಪದ ಹಾಲನ್ನು ಕೇರಳ ರಾಜ್ಯದಲ್ಲಿ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ಸರಿಯಲ್ಲ<br>3. ಭಾರತದಾದ್ಯಂತ ಇತರ ರಾಜ್ಯಗಳಿಗೆ ಹೋಲಿಸಿದರೆ ಕೇರಳ ರಾಜ್ಯದಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದರಿಂದ ಹೈನುಗಾರರಿಗೆ ಹೆಚ್ಚಿನ ಹಾಲಿನ ಬೆಲೆಯನ್ನು ನೀಡುತ್ತಿದ್ದು, ಉತ್ಪಾದಕರಿಗೆ |

| | | |
|---|---|---|
| | | ಹೈನುಗಾರಿಕೆಯನ್ನು ಉತ್ತೇಜಿಸುತ್ತಿದೆ. ಕರ್ನಾಟಕ ಹಾಲು ಮಹಾಮಂಡಳವು ಕಡಿಮೆ ದರಕ್ಕೆ ಹಾಲು ಮಾರಾಟ ಮಾಡುತ್ತಿದ್ದು, ಇದರಿಂದ ಕೇರಳ ರಾಜ್ಯದ ರೈತರಿಗೆ ತೊಂದರೆಯಾಗುತ್ತಿದೆ. ಆದರೆ ಉತ್ಪಾದಕರಿಗೆ ಸರ್ಕಾರದಿಂದ ಪ್ರೋತ್ಸಾಹಧನ ಮತ್ತು ಮಾರಾಟದಿಂದ ಬಂದ ಲಾಭ ಕರ್ನಾಟಕ ರಾಜ್ಯದ ಹಾಲು ಉತ್ಪಾದಕರ ಹಿತ ಕಾಯುತ್ತಿದೆ. ಇದರಿಂದ ಕೇರಳ ಹೈನುಗಾರರಿಗೆ ಧಕ್ಕೆಯಾಗಿರುತ್ತದೆ.<br>4. ಕೇರಳದಲ್ಲಿ ತಾಜಾ ಹಾಲು ಮಾರಾಟದ ಮೂಲಕ ಕರ್ನಾಟಕ ಹಾಲು ಮಹಾಮಂಡಳವು ಡೈರಿ ಸಹಕಾರಿ ಚಳುವಳಿಯ ಪ್ರಮುಖ ಉದ್ದೇಶಗಳನ್ನು ಪೂರೈಸುವಲ್ಲಿ ಎರಡು ರಾಜ್ಯಗಳು ವಿಫಲವಾಗಿರುತ್ತವೆ.<br>5. ಕೇರಳವು ಹಾಲಿನ ಕೊರತೆ ರಾಜ್ಯವಾಗಿದ್ದು, ಸದರಿ ಕೊರತೆಯನ್ನು ನೀಗಿಸಲು ಪ್ರತಿನಿತ್ಯ ಸುಮಾರು 2.00 ಲಕ್ಷ ಲೀಟರ್ ಹಾಲನ್ನು ಖರೀದಿಸುತ್ತಿದ್ದು, ಓಣಂ ನಂತಹ ಹಬ್ಬ, ಹರಿದಿನಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳವು ಪರಿಸ್ಥಿತಿಯ ಲಾಭ ಪಡೆದು ಬೆಲೆಯನ್ನು ವಿಪರೀತ ಏರಿಸುತ್ತಿದ್ದರೂ ಕರ್ನಾಟಕ ಹಾಲು ಮಹಾಮಂಡಳದೊಂದಿಗೆ ಉತ್ತಮ ಸಂಬಂಧ ಉಳಿಸಿಕೊಂಡಿರುತ್ತೇವೆ.<br><br>ಕೇರಳ ಸರ್ಕಾರವು ಪ್ರಸ್ತಾಪಿಸಿರುವ ಪ್ರಮುಖ ಅಂಶಗಳು ಮೇಲ್ಕಂಡಂತಿವೆ. ಆದಾಗ್ಯೂ ಕೇರಳ ಸರ್ಕಾರವು ನಂದಿನಿ ಉತ್ಪನ್ನಗಳ ಮಾರಾಟವನ್ನು ನಿರ್ಬಂಧಿಸಿರುವುದಿಲ್ಲ. |

**ಇ- ಪಸಂಮೀ 116 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**